ನೀಡುತ್ತಿದ್ದರು. ತಾವು ಹೇಳುವುದು ಸಭಿಕರಿಗೂ ಕೇಳಲಿ ಎಂದು ತಮ್ಮದೇ ಆದ ಧ್ವನಿವರ್ಧಕವನ್ನೂ ತಂದಿದ್ದರು. ಓಲಗ ಬೇರೆ, ಸಿಡ್ನಿಯಲ್ಲಿಯೇ ನೆಲೆಸಿರುವ ಮಾಸಿಲಾಮಣಿಯಿಂದ.

ಚಿಕ್ಕ ಪುಟ್ಟ ವಿಧಿಗಳು ಮುಗಿಯುತ್ತಿದ್ದಂತೆ ಪುರೋಹಿತರು ಪ್ರೇಕ್ಷಕರನ್ನು ನಿಶ್ಶಬ್ದವಾಗಿರುವಂತೆ ಹೇಳಿ ಕಾಶಿಯಾತ್ರೆಗೆ ತೊಡಗಿದರು. ಇದರ ಅರ್ಥವನ್ನು ಕೇಳಿಸಿಕೊಂಡ ಸ್ಯಾಮ್ ಗಹಗಹಿಸಿ ನಕ್ಕ. "ಪುರೋಹಿತರೇ ನಾನೇ ಬಯಸಿ ಬಯಸಿ ತಾರಾಳನ್ನು ಮದುವೆ ಆಗುತ್ತಿದ್ದೇನೆ. ಕಾಶಿಗೆ ಹೋಗಿ ಉನ್ನತ ವ್ಯಾಸಂಗ ಮಾಡುವ ಪ್ರಮೇಯವೇ ಇಲ್ಲ" ಎಂದ. ಪುರೋಹಿತರೂ ನಕ್ಕು, "ಇವೆಲ್ಲಾ ಶಾಸ್ತ್ರಕ್ಕೆ ಅಷ್ಟೆ!" ಎಂದರು.

ನಂತರ ಓಲಗದ ಸದ್ದು ಜೋರಾಗಿ ಅಂತರ್ಪಟ ಹಿಡಿದಾಗ ಅವನಿಗೆ ಇವೆಲ್ಲಾ ಆಟ ಎನಿಸಿತು. ಆದರೆ, ಪರದೆ ಜಾರಿ, ತಾರಾ ಮುಗುಳ್ನಗುತ್ತಾ ಇವನ ಮೇಲೆ ಅಕ್ಕಿ ಹಾಕಿದಾಗ ಅವನು ದಂಗಾಗಿ ನಿಂತ. ಇದು ನಿಜವಾಗಿ ತಾರಾಳೇನೇ? ಪ್ರತಿದಿನ ಜೀನ್ಸ್ ತೊಟ್ಟು, ಶರ್ಟ್ ಧರಿಸಿರುತ್ತಿದ್ದ ತಾರಾ ಎಲ್ಲಿ? ಇಂದು ಸೀರೆ ಧರಿಸಿ, ಅಪಾರ ಆಭರಣಗಳನ್ನು ತೊಟ್ಟು, ಕೇಶ ಶೃಂಗಾರ ಮಾಡಿಕೊಂಡು ಯಾವುದೋ ತಾರೆ ಅಥವಾ ದೇವಿಯಂತೆ ಎದುರು ನಿಂತಿರುವ ರೂಪಸಿ ಎಲ್ಲಿ? ಮೆಚ್ಚಿ ಮುಂದಾಗುವುದಕ್ಕೆ ಕಾದು ನಿಂತ.

ಕನ್ಯಾದಾನದ ಸಮಯ. ತಾರಾಳ ಕೈಯನ್ನು ತನ್ನ ಕೈಯ್ಯಲ್ಲಿ ಇರಿಸಿ ತಂದೆ ತಾಯಿಯರ ಆದಿಯಾಗಿ ಕುಟುಂಬದ ಸದಸ್ಯರೆಲ್ಲಾ ಮೇಲೆ ನೀರು ಸುರಿಯುತ್ತಿದ್ದಾರೆ. ಪುರೋಹಿತರು "ಲಕ್ಷ್ಮಿ ಸಮಾನಳಾದ ನಮ್ಮ ಮಗಳನ್ನು ವಿಷ್ಣು ಸಮಾನನಾದ ನಿನಗೆ ಧಾರೆ ಎರೆದು ಕೊಡುತ್ತಿದ್ದೇವೆ. ಅವಳನ್ನು ಕಾಪಾಡುವ ಭಾರ ನಿನ್ನದು" ಎಂದು ನುಡಿದಾಗ ಚಕಿತನಾದ ಸ್ಯಾಮ್.

"ಗಟ್ಟಿಮೇಳ, ಗಟ್ಟಿಮೇಳ" ಎಂದು ಪುರೋಹಿತರು ಕೂಗಿದಂತೆ ಸಭೆಯಲ್ಲಿ ಮಿಂಚಿನ ಸಂಚಾರವಾದಂತಾಯಿತು. ಸ್ಯಾಮನ ಕೈಯ್ಯಲ್ಲಿ ಮಾಂಗಲ್ಯಸರವನ್ನು ಕೊಟ್ಟು, "ಇವಳ ಕೊರಳಲ್ಲಿ ಕಟ್ಟು" ಎಂದು ಸೂಚನೆಯನ್ನಿತ್ತರು. ಸ್ಯಾಮ್ ತಾಳಿಯನ್ನು ಕಟ್ಟಿದೊಡನೆ ಕರತಾಡನ, ಎಲ್ಲಾ ದಿಕ್ಕುಗಳಿಂದಲೂ ಮಂತ್ರಾಕ್ಷತೆಯ ಮಳೆ ಸುರಿಯಿತು. ಸ್ಯಾಮನಿಗೆ ರೋಮಾಂಚನವಾಯಿತು.

ನೆರೆದಿದ್ದ ಬಂಧು ಮಿತ್ರರು ವಧೂವರರನ್ನು ಅಭಿನಂದಿಸಿದರು. ಕೆಲವು ಹಿರಿಯರಂತೂ, "ಇದು ಜನ್ಮ ಜನ್ಮದ ಋಣಾನುಬಂಧ, ನೋಡಿ ನಿಮ್ಮಿಬ್ಬರನ್ನೂ ಹೇಗೆ ಹೊಸೆದಿದೆ! ಭಾರತದ ಯಾವುದೋ ಚಿಕ್ಕ ಹಳ್ಳಿಯಲ್ಲಿ ಹುಟ್ಟಿದವರು ತಾರಾಳ ತಂದೆ ತಾಯಿ. ಅವರನ್ನು ಇಲ್ಲಿಗೆ ಬರುವಂತೆ ಮಾಡಿ, ಅವರ ಮಗಳು ನಿಮ್ಮನ್ನು ಮದುವೆ ಆಗುವಂತೆ ಮಾಡುವುದು ಮಾನವ ಪ್ರಯತ್ನ ಮಾತ್ರದಿಂದ ಸಾಧ್ಯವೇ? ಅದು ದೈವ ನಿರ್ಧಾರ ಅಲ್ಲವೇ? ನಿಜಕ್ಕೂ ತಾರಾ ಅದೃಷ್ಟಶಾಲಿ." ಎಂದೆಲ್ಲಾ ಕೊಂಡಾಡಿದರು. ಇನ್ನು, "ನಮ್ಮ ಮನೆಗೆ ಬನ್ನಿ, ನಮ್ಮ ಊರಿಗೆ ಬನ್ನಿ" ಎಂಬ ಆಹ್ವಾನಗಳಿಗೆ ಲೆಕ್ಕವಿರಲಿಲ್ಲ.

ಮದುವೆಯ ನಂತರ ಸುಮ್ಮನೇ ಕುಳಿತಿದ್ದ

